ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)**

ಸಂಖ್ಯೆ: ಮುಇ(ವಿ)/ಬೆಂಮಕ್ಷೇದವ/ಅಇ/ಸಕಾಇ-2/ಕ-152/18-19/4444-47
ಲಗತ್ತು:

Ph.No.:080-22113868
Fax No.:080-22113839
Mob.No:9449045888
Email ID: cebmaz@bescom.co.in

ಮುಖ್ಯ ಇಂಜಿನಿಯರ್(ವಿ) ರವರ ಕಛೇರಿ,
(ವಾಣಿಜ್ಯ, ಕಾರ್ಯ ಮತ್ತು ಪಾಲನೆ)
ಬೆಂಗಳೂರು ಮಹಾನಗರಕ್ಷೇತ್ರ ದಕ್ಷಿಣವಲಯ
ನಂ.14/3,3ನೇ ಮಹಡಿ, ಮಹರ್ಷಿಅರವಿಂದ
ಭವನ, ಬೆಂಗಳೂರು-560 001.

15/10/2018

ಗೆ,

ಮೆ॥ ಎಸ್.ಎನ್.ಎನ್ ಬಿಲ್ಡರ್ಸ್ ಪ್ರೈವೆಟ್ ಲಿಮಿಟೆಡ್,
ಯಲೆನಹಳ್ಳಿ ಗ್ರಾಮದ ಸ.ನಂ. 41/1, 2, 3, 4, 7, 42/5
& ಬೇಗೂರು ಗ್ರಾಮದ ಸ.ನಂ.49/2,
ಬೆಂಗಳೂರು.

**ಮಾನ್ಯರೇ,**

**ವಿಷಯ:** ಹೆಚ್.ಎಸ್.ಆರ್ ವಿಭಾಗದ, ಎಸ್-10 ಉಪ ವಿಭಾಗ ವ್ಯಾಪ್ತಿಯ ಯಲೆನಹಳ್ಳಿ ಗ್ರಾಮದ ಸ.ನಂ. 40/1, 2, 3, 4, 5, 6 & 49/1, 41/1, 2, 3, 4, 7, 42/5 & ಬೇಗೂರು ಗ್ರಾಮದ ಸ.ನಂ.49/2 ರಲ್ಲಿ ಮೆ॥ ಎಸ್.ಎನ್.ಎನ್ ಬಿಲ್ಡರ್ಸ್ ಪ್ರೈವೆಟ್ ಲಿಮಿಟೆಡ್ ರವರು ನಿರ್ಮಿಸಲುದ್ದೇಶಿಸಿರುವ ಬಹುಮಹಡಿ ವಸತಿ ಕಟ್ಟಡಕ್ಕೆ ಒಟ್ಟು 3205ಕೆ.ವಿ.ಎ (2564ಕಿ.ವ್ಯಾ) ವಿದ್ಯುತ್ ಸಂಪರ್ಕವನ್ನು ನೀಡುವ ಸಂಬಂಧ ಅನುಮೋದನೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯ ಕುರಿತು.

**ಉಲ್ಲೇಖ:** ಪತ್ರ ಸಂ: ಬಿಸಿ-18/ಮುಪ್ರವ್ಯ(ಕಾ)/ಕ-533(65)/18-19/5059 ದಿನಾಂಕ:11.10.2018.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹೆಚ್.ಎಸ್.ಆರ್ ವಿಭಾಗದ, ಎಸ್-10 ಉಪ ವಿಭಾಗ ವ್ಯಾಪ್ತಿಯ ಯಲೆನಹಳ್ಳಿ ಗ್ರಾಮದ ಸ.ನಂ. 41/1, 2, 3, 4, 7, 42/5 & ಬೇಗೂರು ಗ್ರಾಮದ ಸ.ನಂ49/2 ರಲ್ಲಿ ಮೆ॥ ಎಸ್.ಎನ್.ಎನ್ ಬಿಲ್ಡರ್ಸ್ ಪ್ರೈವೆಟ್ ಲಿಮಿಟೆಡ್ ರವರು ನಿರ್ಮಿಸಲುದ್ದೇಶಿಸಿರುವ ಬಹುಮಹಡಿ ವಸತಿ ಕಟ್ಟಡಕ್ಕೆ ಒಟ್ಟು 3205ಕೆ.ವಿ.ಎ (2564ಕಿ.ವ್ಯಾ) ವಿದ್ಯುತ್ ಸಂಪರ್ಕವನ್ನು ನೀಡುವ ಸಂಬಂಧ ನಿರಾಕ್ಷೇಪಣಾ ಪತ್ರವನ್ನು ನೀಡಲು ಉಲ್ಲೇಖಿತ ನಿಗಮ ಕಛೇರಿ ಪತ್ರದಲ್ಲಿ ನೀಡಿರುವ ಅನುಮೋದನೆಯನ್ವಯ ಕೆಳಕಂಡ ನಿಬಂಧನೆಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ:

1. ನೀವು ಒಟ್ಟು **3205ಕೆ.ವಿ.ಎ (2564 ಕಿ.ವ್ಯಾ)** ವಿದ್ಯುತ್ ಸಂಪರ್ಕವನ್ನು ಪಡೆಯುವ ಸಂಬಂಧ ಸ್ವಯಂಕಾರ್ಯನಿರ್ವಹಣಾ ಯೋಜನೆಯಡಿ 66/11 ಕೆವಿ ಬಿಟಿಎಂ ವಿದ್ಯುತ್ ಉಪಕೇಂದ್ರದಲ್ಲಿ ನೂತನ 11ಕೆವಿ ಬ್ರೇಕರ್‌ನ್ನು ಅಳವಡಿಸಿ ಅಲ್ಲಿಂದ ಮುಂದಕ್ಕೆ ನೂತನ 11 ಕೆವಿ ಮಾರ್ಗವನ್ನು 3*400 ಚ.ಮಿ.ಮೀ ಹೆಚ್.ಟಿ ಭೂಗತ ಕೇಬಲ್‌ನೊಂದಿಗೆ ತಮ್ಮ ಆವರಣದವರೆಗೆ ಸುಮಾರು 3.5 ಕಿ.ಮೀಗಳನ್ನು ದೂರ ವಿಸ್ತರಿಸಿಕೊಳ್ಳುವುದು ಹಾಗೂ ಕೇಬಲ್ ಮಾರ್ಗದಲ್ಲಿ ಸೂಕ್ತ ಸಂಖ್ಯೆ ಇಂಟರ್ ಪೋಸಿಂಗ್ ಓಡಿಗಳನ್ನು ಅಳವಡಿಸುವುದು.
2. ಸದರಿ ನಿರಾಕ್ಷೇಪಣಾ ಪತ್ರದ ಸಿಂಧುತ್ವದ ಅವಧಿಯ ಅನುಮೋದನೆ ನೀಡಿದ ದಿನದಿಂದ 2 ವರ್ಷಗಳಿಗೆ ಮಾತ್ರ ಸೀಮಿತವಾಗಿದ್ದು, ವಿದ್ಯುತ್ ಸರಬರಾಜು ಮಾಡಲು ಮಂಜುರಾತಿ ನೀಡುವ ಅವಧಿಯಲ್ಲಿ ನಿಯತ ವಿದ್ಯುತ್ ಸರಬರಾಜು ವ್ಯವಸ್ಥೆ ಕುರಿತು ಪರಿಶೀಲಿಸಲಾಗುವುದು
3. ಭವಿಷ್ಯದಲ್ಲಿ ನಿಮ್ಮ ಕೋರಿಕೆಯು 7500 ಕೆ.ವಿ.ಎ. ಮೀರಿದಲ್ಲಿ ತಮ್ಮ ಆವರಣದಲ್ಲಿ ಸ್ವಯಂಕಾರ್ಯನಿರ್ವಹಣಾ ಯೋಜನೆಯಡಿ 66/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಿಕೊಳ್ಳುವುದು.
4. ಈ ನಿರಾಕ್ಷೇಪಣಾ ಪತ್ರದಿಂದ ಬರುವ ಯಾವುದೇ ಭಾದ್ಯತೆಗಳಿಗೆ ಬೆವಿಕಂ ಜವಾಬ್ದಾರಿಯಾಗಿರುವುದಿಲ್ಲ.

5. ನಿಮ್ಮ ಆವರಣದಲ್ಲಿ ಯಾವುದೇ ಬೆವಿಕಂ/ಕೆಪಿಟಿಸಿಎಲ್ ವಿದ್ಯುತ್ ಮಾರ್ಗಗಳು ಹಾದು ಹೋಗುತ್ತಿದ್ದಲ್ಲಿ ಅವುಗಳನ್ನು ನೀವೇ ಬೆವಿಕಂ/ಕೆಪಿಟಿಸಿಎಲ್ ನಿಯಮಗಳಿಗೆ ಅನುಸಾರವಾಗಿ ನಿಮ್ಮ ಸ್ವಂತ ಖರ್ಚಿನಲ್ಲಿ ಸ್ಥಳಾಂತರಗೊಳಿಸುವುದು.

6. ಮೇಲ್ಕಂಡ ನಿಮ್ಮ ಆವರಣದಲ್ಲಿ, ಮುಂಬರುವ ದಿನಗಳಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವಾಗ ನೀವು ಹಾಲಿ ಚಾಲ್ತಿಯಲ್ಲಿರುವ ಕರ್ನಾಟಕ ಕೆ.ಇ.ಆರ್.ಸಿ ನಿಬಂಧನೆಗಳನ್ನು ಮತ್ತು ವಿದ್ಯುತ್ ಸರಬರಾಜು ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

7. ನಿಮ್ಮ ಆವರಣದಲ್ಲಿ ಬರುವ ವಿವಿಧ ಕಟ್ಟಡಗಳಿಗೆ ಬೆವಿಕಂ ನಿಯಮಗಳಿಗೆ ಅನುಸಾರವಾಗಿಯೇ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗುವುದು.

8. ಈ ನಿರಾಕ್ಷೇಪಣಾ ಪತ್ರವನ್ನು ಭಾವಿ ಗ್ರಾಹಕರು ಬಿಡಿಎ/ಬಿಬಿಎಂಪಿ ಅಥವಾ ತತ್ಸಂಬಂಧ ಇಲಾಖೆಗಳಿಂದ ಬಹುಮಹಡಿ ಕಟ್ಟಡದ ಮಂಜೂರಾತಿ ನಕ್ಷೆ ಪಡೆಯಲು ನೀಡಲಾಗಿದೆ ವಿನಹ ಬೆವಿಕಂ ಯಾವುದೇ ವಿದ್ಯುತ್ ಮಂಜೂರಾತಿ ನೀಡಲು ಬದ್ಧವಾಗಿರುವುದಿಲ್ಲ. ವಿದ್ಯುತ್ ಕೋರಿಕೆಯನ್ನು ಆ ವೇಳೆಯಲ್ಲಿ ತಾಂತ್ರಿಕ ಕಾರ್ಯ ಸಾಧ್ಯತೆಯನ್ನು ಪರಿಶೀಲಿಸಿ ನೀಡಲಾಗುವುದು.

**ತಮ್ಮ ವಿಶ್ವಾಸಿ,**

**ಮುಖ್ಯ ಇಂಜಿನಿಯರ್ (ವಿ),**
**ಬೆಂಗಳೂರು ಮಹಾನಗರಕ್ಷೇತ್ರ ದಕ್ಷಿಣವಲಯ**